## ದಿನಾಂಕ 08-04-2015 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಎ.ಕೆ.ಎಂ. ನಾಯಕ್, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎಂ.ಆರ್. ಪೂಜಾರ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಟಿ. ರಾಮನಾಯಕ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
6. ಶ್ರೀ ವೃಷಬೇಂದ್ರಮೂರ್ತಿ, ಕಾರ್ಯದರ್ಶಿ.
7. ಶ್ರೀ ಬಿ. ಶ್ರೀರಾಮ ರೆಡ್ಡಿ, ಕಾನೂನು ಅಧಿಕಾರಿ.
8. ಶ್ರೀಮತಿ ಶ್ರೀಲತ ಕೋಟೆಮಠ್, ಅಧೀನ ಕಾರ್ಯದರ್ಶಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**ಅನುಪಾಲನಾ ವರದಿ.**

ಹಿಂದಿನ ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ವಯ ಕ್ರಮ ವಹಿಸಲಾಗಿರುವ ಈ ಕೆಳಕಂಡ ಅನುಪಾಲನಾ ವರದಿಯನ್ನು ಕಾರ್ಯದರ್ಶಿಯವರು ಸಭೆಯಲ್ಲಿ ಮಂಡಿಸಿದರು:

1) **ಆಯೋಗದಲ್ಲಿ ವಿಡಿಯೋ ಕಾನ್ಫರೆನ್ಸ್ ನಡೆಸುವ ಕುರಿತು – ಮುಂದೂಡಿದ ವಿಷಯ.**

ಈ ಬಗ್ಗೆ ಪರಿಶೀಲಿಸಲಾಗಿ ಯಾವುದೇ ಅಧಿಸೂಚನೆ/ನಿಯಮಗಳನ್ನು ಹೊರಡಿಸಿರುವ ಬಗ್ಗೆ ದಾಖಲೆಗಳು ಇರುವುದಿಲ್ಲವೆಂದು ಸಭೆಗೆ ತಿಳಿಸಲಾಯಿತು.

2) **ಆಯೋಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಲಾ–ಅಸಿಸ್ಟೆಂಟ್ ಮತ್ತು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಲೀ–ಅಸಿಸ್ಟೆಂಟ್‌ಗಳ ಕಾರ್ಯ ಹಂಚಿಕೆಯ ಪಟ್ಟಿಯನ್ನು ಒದಗಿಸುವ ಬಗ್ಗೆ.**

ಪಟ್ಟಿ ಈಗಾಗಲೇ ಅನುಮೋದನೆಯಾಗಿದ್ದು, ಈ ಪ್ರಸ್ತಾವನೆಯನ್ನು ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆ.

3) **ಆಯೋಗಕ್ಕೆ ಅಗತ್ಯವಿರುವ ದಲಾಯತ್ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ.**

ಹುದ್ದೆಗಳ ಮಂಜೂರಾತಿ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ.

4) **ರಾಜ್ಯದ ಉನ್ನತ ಮಟ್ಟದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಪರಿಗಣಿಸುವ ಕುರಿತು.**

ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿರುತ್ತದೆ.

2.../-

5) ರಾಜ್ಯ ಮಾಹಿತಿ ಆಯುಕ್ತರುಗಳ ಸ್ಥಾನ-ಮಾನ (**status**) ಕುರಿತು.

ಈ ಬಗ್ಗೆ ಮುಂದಿನ ಸಭೆಯಲ್ಲಿಯೂ ಪ್ರಸ್ತಾಪ ಇರುವುದರಿಂದ, ಈ ಸಭೆಯ ನಡವಳಿ ನಂತರ ಕ್ರಮ ಜರುಗಿಸಲಾಗುವುದು.

6) **ಆಯೋಗದ 2014-15ರ ವಾರ್ಷಿಕ ವರದಿ ತಯಾರಿಸುವ ಕುರಿತು.**

ಈ ಬಗ್ಗೆ ಕ್ರಮ ತೆಗೆದುಕೊಂಡು ವಿವಿಧ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆಸಲಾಗುತ್ತಿದೆ.

7) ಬಿಪಿಎಲ್ ಅರ್ಜಿದಾರರಿಗೆ ಈಗ ಆಯೋಗದಲ್ಲಿ ಪಾಲನೆಯಾಗುತ್ತಿರುವ ಕ್ರಮವನ್ನು ಪಾಲಿಸುವುದಾಗಿ ಸಭೆ ತೀರ್ಮಾನಿಸಿತು.

**ಕ್ರಮ: ಕಾರ್ಯದರ್ಶಿ**

1. **ಹೊರಗುತ್ತಿಗೆ ನೌಕರರ ಟೆಂಡರ್ ಪ್ರಕ್ರಿಯೆಯು ಮುಗಿದಿದ್ದು ಆ ಬಗ್ಗೆ ಮಾಹಿತಿಯನ್ನು ನೀಡುವುದು.**

ಹೊರಗುತ್ತಿಗೆ ನೌಕರರ ಟೆಂಡರ್ ಅಂಗೀಕರಿಸಿರುವುದನ್ನು ಆಯೋಗ ಗಮನಿಸಿತು.

2. **ಕಾನೂನು ಅಧಿಕಾರಿ ನೇಮಕಾತಿ ಕುರಿತು.**

ಅವರ ಗುತ್ತಿಗೆ ಅವಧಿ ಮುಗಿಯುವ ತನಕ ಮುಂದುವರೆಸಲು ಆಯೋಗ ಒಮ್ಮತದಿಂದ ಶ್ರೀ ಬಿ. ಶ್ರೀರಾಮ ರೆಡ್ಡಿ, ಕಾನೂನು ಅಧಿಕಾರಿಯವರನ್ನು ಕೋರಿತು. ಅವರ ಉತ್ತರಾಧಿಕಾರಿ ನೇಮಿಸುವ ಪ್ರಕ್ರಿಯೆಯನ್ನು ತದನಂತರ ತೆಗೆದುಕೊಳ್ಳಲು ಆಯೋಗ ತೀರ್ಮಾನಿಸಿತು.

3. **ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

   1. Prepone, Postpone, Hearing ದಿನಾಂಕಗಳನ್ನು ನಿಗಧಿಪಡಿಸುವ ಬಗ್ಗೆ, ಹಿರಿಯ ನಾಗರೀಕರು, ಅಂಗವಿಕಲರು ಇವರ ಅರ್ಜಿಗಳನ್ನು ಆದ್ಯತೆ ಮೇರೆಗೆ ಸ್ವೀಕರಿಸುವ ಬಗ್ಗೆ, ನ್ಯಾಯಾಲಯ ಸಭಾಂಗಣಗಳ ಬದಲಾವಣೆ ಕೇಳಿ ಬರುವ ಅರ್ಜಿಗಳ ಬಗ್ಗೆ ಆಯಾ ನ್ಯಾಯಾಲಯ ಸಭಾಂಗಣಗಳ ಆಯುಕ್ತರುಗಳ ತೀರ್ಮಾನವೇ ಅಂತಿಮವಾಗಿರುತ್ತದೆ ಎಂಬುದರ ಬಗ್ಗೆ ಸಭೆ ಸಮ್ಮತಿಸಿತು.

   2. ರೆಕಾರ್ಡ್ ಶಾಖೆಯಿಂದ ಅರ್ಜಿದಾರರು ಮಾಹಿತಿ ಹಕ್ಕು ಕಾಯ್ದೆ-2005 ರಂತೆ 6(1)ರಲ್ಲಿ ಕೇಳುವ ಕಡತದಲ್ಲಿರುವ ಮಾಹಿತಿಗಳನ್ನು ಕಡ್ಡಾಯವಾಗಿ ಕರ್ನಾಟಕ ಮಾಹಿತಿ ಆಯೋಗದ ಸಾರ್ವಜನಿಕ ಮಾಹಿತಿ ಅಧಿಕಾರಿ (ಪಿಐಓ)ರವರು ನೀಡುವಂತೆ ಸಭೆ ಸೂಚಿಸಿತು

   3. 10ಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸುವ ಅರ್ಜಿದಾರರ ಅರ್ಜಿಗಳನ್ನು ಪ್ರತಿ ದಿನ ಕೇವಲ 2-3 ಸ್ವೀಕರಿಸಿ, ಒಂದೇ ಅರ್ಜಿಗಳನ್ನು ಹಾಕಿಕೊಂಡಿರುವವರ ಪ್ರಕರಣಗಳ ಅರ್ಜಿದಾರರಿಗೆ, ಆದ್ಯತೆ ನೀಡುವ ಬಗ್ಗೆಯೂ ಆಯಾ ನ್ಯಾಯಾಲಯದ ಆಯುಕ್ತರ ತೀರ್ಮಾನಕ್ಕೆ ಬಿಡುವುದಾಗಿ ಸಭೆ ತೀರ್ಮಾನಿಸಿತು.

3.../-

4. ಗೋವಾ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಆಂಧ್ರಪ್ರದೇಶ- ಈ ದಕ್ಷಿಣ ಭಾರತ ರಾಜ್ಯಗಳ ಆಯುಕ್ತರುಗಳ ಸೇವಾ ಷರತ್ತುಗಳ ಪ್ರತಿಗಳನ್ನು ಪಡೆದುಕೊಂಡು Comparative Statement ತಯಾರಿಸಿ ಮಂಡಿಸಲು ಕಾರ್ಯದರ್ಶಿಯವರಿಗೆ ಸೂಚಿಸಲಾಯಿತು.

5. ಮಾಹಿತಿ ಹಕ್ಕು ಕಾಯ್ದೆ ಕಲಂ 18(1)ರನ್ವಯ ಸಲ್ಲಿಸುವ ದೂರುಗಳ ಕುರಿತು.

ಮಾಹಿತಿ ಹಕ್ಕು ಕಾಯ್ದೆ-2005 ರನ್ವಯ ಅರ್ಜಿದಾರರು ಮಾಹಿತಿ ಕೋರಿಕೆ ಅರ್ಜಿ ಪ್ರತಿ ಹಾಗೂ ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಪ್ರತಿ ಸಲ್ಲಿಸುತ್ತಾ, ಎರಡನೇ ಮೇಲ್ಮನವಿಯನ್ನು ನಿಗಧಿತ ಅವಧಿಯಲ್ಲಿ ತಪ್ಪಾಗಿ ದೂರೆಂದು ಸಲ್ಲಿಸಿದಲ್ಲಿ ಅದನ್ನು 19(3) ರಡಿಯಲ್ಲಿ ಎರಡನೇ ಮೇಲ್ಮನವಿ ಎಂದು ಹಿಂದಿನ ಸಭೆಯಲ್ಲಿ ತೀರ್ಮಾನಿಸಿರುವುದನ್ನು ಪರಿಗಣಿಸಲಾಯಿತು.

ಕ್ರಮ: ಕಾರ್ಯದರ್ಶಿ

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು